ಫುಟ್‌ಬಾಲ್ ಕ್ರೀಡಾಂಗಣ ಸ್ಥಳದಲ್ಲಿ ಖಾಸಗಿ ಮಳಿಗೆಗಳ ಸಂಕೀರ್ಣ ನಿರ್ಮಾಣ.

3082 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಬೆಂಗಳೂರು ನಗರ ರಾಜ್ಯ ಫುಟಬಾಲ್ ಸಂಸ್ಥೆಗೆ ಕ್ರೀಡಾಂಗಣ ನಿರ್ಮಾಣಕ್ಕಾಗಿ ನೀಡಿದ ಸ್ಥಳದಲ್ಲಿ ಖಾಸಗಿಯವರಿಗೆ ಕಾಂಪ್ಲೆಕ್ಸ್ ನಿರ್ಮಾಣಕ್ಕೆ ಗುತ್ತಿಗೆ ನೀಡಿರುವುದು ನಿಜವೇ?*

2) *ಈ ಗುತ್ತಿಗೆ ಸರ್ಕಾರದ ನಿರ್ದೇಶನದ ಸ್ಪಷ್ಟ ಉಲ್ಲಂಘನೆಯಲ್ಲವೇ.*

3) *ಈ ಕುರಿತು ಸಂಸ್ಥೆಯ ವಿರುದ್ಧ ಸರ್ಕಾರ ಕೈಗೊಂಡ ಕಾನೂನು ಕ್ರಮಗಳೇನು.*

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

1) ಹೌದು.

2) ಇಲ್ಲ.

3) ಉದ್ಭವಿಸುವುದಿಲ್ಲ.

ಉ.ಕ. ಜಿಲ್ಲೆಯ ಪಾವಿನ ಕುರ್ವೆ ಹಾಗೂ ಇತರೆ ಸ್ಥಳಗಳಲ್ಲಿ ಸಮುದ್ರ ಕೊರೆತ.

2965 - ಶ್ರೀ ಆರ್.ವಿ. ದೇಶಪಾಂಡೆ(ಹಳಿಯಾಳ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉತ್ತರಕನ್ನಡ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಸಮುದ್ರ ಕೊರೆತದಿಂದ ಭಾರೀ ಪ್ರಮಾಣದ ಹಾನಿ ಸಂಭವಿಸುತ್ತಿದೆ?*

ಆ) *ಈ ಜಿಲ್ಲೆಯ ಪಾವಿನಕುರ್ವೆಯಲ್ಲಿ ಸಮುದ್ರ ಕೊರೆತದಿಂದ ನೂರಾರು ಕುಟುಂಬಗಳು ನಿರ್ಗತಿಕರಾಗುವ ಸ್ಥಿತಿಗೆ ಬಂದಿರುವುದನ್ನು ಸರ್ಕಾರ ಗಮನಿಸಿದೆಯೇ?*

ಇ) *ಈ ಸಮುದ್ರ ಕೊರೆತವನ್ನು ತಡೆಗಟ್ಟಲು ಸರ್ಕಾರ ಯಾವುದಾದರೂ ಯೋಜನೆಗಳನ್ನು ರೂಪಿಸಿದೆಯೇ ಅಥವಾ ಯಾರಿಂದಾಲಾದರೂ ಸಲಹೆಯನ್ನು ಕೇಳಿದೆಯೇ, ಕೇಳಿದ್ದಲ್ಲಿ ಆ ವಿವರಗಳನ್ನು ನೀಡುವುದು.*

ಈ) *ಸರ್ಕಾರ ಸಮುದ್ರ ಕೊರೆತವನ್ನು ತಡೆಗಟ್ಟುವ ಕಾರ್ಯಕ್ಕಾಗಿ ಉತ್ತರ ಕನ್ನಡ ಜಿಲ್ಲೆಗೆ ವಿಶೇಷ ಹಣವನ್ನೇನಾದರೂ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವುದೇ, ಇದಕ್ಕಾಗಿ ಇಲ್ಲಿಯವರೆವಿಗೆ ಖರ್ಚು ಮಾಡಿರುವ ಹಣ ಎಷ್ಟು?*

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು):

ಅ) ಉತ್ತರಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಜಾಲಿ ತೆಂಗಿನಗುಂಡಿ, ಹಾಡಿನಸೂಡಿ ಗದ್ದೆ, ಹೊನ್ನಗದ್ದೆ, ಮಾವಳಿಳಿ ಹೊನ್ನಾವರಿ ತಾಲ್ಲೂಕಿನ ಮಂಕಿ, ಬೈಲೂರ್ ಪಾವಿನಕುರ್ವೆ ಮತ್ತು ಕಾರವಾರ ತಾಲ್ಲೂಕಿನ ದೇವಭಾಗ್ ಈ ಸ್ಥಳಗಳಲ್ಲಿ ಸಮುದ್ರ ಕೊರೆತದಿಂದ ಭಾರಿ ಹಾನಿ ಸಂಭವಿಸುತ್ತಿದೆ.

ಆ) ಪಾವಿನಕುರ್ವೆಯಲ್ಲಿ ಸಮುದ್ರ ಕೊರೆತದಿಂದ ಹಲವಾರು ಕುಟುಂಬಗಳು ತೊಂದರೆಗೊಳಗಾಗಬಹುದೆಂಬುದನ್ನು ಸರ್ಕಾರ ಗಮನಿಸಿದೆ.